ವಿರುದ್ಧವಾಗಿರುವ ಅಲೆಗಳನ್ನು ಮನಸ್ಸಿನಲ್ಲಿ ಎಬ್ಬಿಸುವುದರಿಂದ, ಅದನ್ನು ನಿವಾರಿಸಲು ಸಾಧ್ಯವೆಂದು ನಮಗೆ ತೋರುತ್ತದೆ.... ಕದಿಯುವ ಆಲೋಚನೆ ಬಂದಾಗ ಕದಿಯದೆ ಇರುವ ಆಲೋಚನೆಯನ್ನು ಮಾಡಬೇಕು. ಒಬ್ಬನಿಂದ ಕೊಡುಗೆ ಸ್ವೀಕರಿಸುವ ಯೋಚನೆ ಬಂದಾಗ, ಅದನ್ನು ಸ್ವೀಕರಿಸದಿರುವ ಆಲೋಚನೆಯನ್ನು ಮಾಡಬೇಕು." (ರಾಜಯೋಗ, ಪುಟ ೧೪೬)

ತ್ಯಾಗ ಮತ್ತು ಸೇವೆಗಳೆಂಬ ಅವಳಿ ಆದರ್ಶಗಳನ್ನು ಅನುಷ್ಠಾನ ಗೊಳಿಸುವ ಸಂದೇಶವು ಸದ್ಯದ ಸಾಮಾಜಿಕ ಪರಿಸ್ಥಿತಿಯಲ್ಲಿ ಅವಾಸ್ತವ ವಾದುದು ಮತ್ತು ಅಸ್ವಾಭಾವಿಕವಾದುದು ಎಂದೆನಿಸಬಹುದು. ಆದರೆ, ನಾವು ಈ ವಿಚಾರದಲ್ಲಿ ವ್ಯಾಸ ಮಹರ್ಷಿಗಳ ಈ ಮಾತನ್ನು ಪಾಲಿಸುವುದು ಒಳಿತು: "ಧರ್ಮದ ಪಥದಲ್ಲಿ ಮುಂದುವರಿದರೆ, ಒಬ್ಬನು ಅರ್ಥವನ್ನೂ ಗಳಿಸಿಕೊಳ್ಳಬಹುದು ಮತ್ತು ಕಾಮನೆಗಳನ್ನೂ ತೀರಿಸಿಕೊಳ್ಳಬಹುದು" (ಮಹಾಭಾರತ, ೧೮:೫:೪೯). ಇಲ್ಲಿ ಧರ್ಮವೆಂದರೆ, ಸದಾಚಾರ, ವಿಶ್ವವ್ಯಾಪಿ ನೈತಿಕ ನಿಯಮ.

ಪೋಷಕರಾಗಿ ಅಥವಾ ಶಿಕ್ಷಕರಾಗಿ, **ತ್ಯಾಗ ಮತ್ತು ಸೇವೆಗಳೆಂಬ** ಈ ಅವಳಿ ಆದರ್ಶಗಳನ್ನು ನೀವು ಅನುಷ್ಠಾನಕ್ಕೆ ತರಬೇಕು. ಆಗ ನಿಶ್ಶಬ್ದವಾಗಿ ಆದರೆ ಖಂಡಿತವಾಗಿ ನಿಮ್ಮ ಮಕ್ಕಳ ಮತ್ತು ವಿದ್ಯಾರ್ಥಿಗಳ ಚಾರಿತ್ರ್ಯನಿರ್ಮಾಣದ ಮೇಲೆ ನೀವು ಗಾಢವಾದ ಪ್ರಭಾವವನ್ನು ಬೀರುತ್ತೀರಿ. (ಕೃಪೆ: Parents and Teachers in Value Education, Publisher: Ramakrishna Mission, Belur Math)

**(ಮುಂದಿನ ತಿಂಗಳು: ಉಪಾಧ್ಯಾಯರಿಗಾಗಿ ಮಾರ್ಗದರ್ಶಿ ಸೂತ್ರಗಳು)**

## ದಿವ್ಯಸ್ಮೃತಿಪ್ರಭ

**ಒ**ಮ್ಮೆ ಸ್ವಾಮಿ ಶಿವಾನಂದರು ನೀಲಗಿರಿಯ ಬೆಟ್ಟಗಳಲ್ಲಿ ತಮ್ಮ ಸೇವಕ ನೊಡನೆ ಗಾಳಿ ಸೇವನೆಗಾಗಿ ಹೊರಟರು. ದಾರಿಯಲ್ಲಿ ಪಾಶ್ಚಾತ್ಯ ಕ್ರಿಶ್ಚಿಯನ್ ಮಹಿಳೆಯೊಬ್ಬಳು ಇದಿರಾದಳು. ಸ್ವಾಮಿಗಳು ಸ್ನೇಹಪರ ಧ್ವನಿಯಲ್ಲಿ 'ನಮಸ್ಕಾರ' ಎಂದರು. ಆದರೆ ಆ ಮಹಿಳೆ ಅವರನ್ನು ದುರುಗುಟ್ಟಿಕೊಂಡು ತಿರಸ್ಕಾರ ಭಾವದಿಂದ ನೋಡಿ, ನಮಸ್ಕಾರವನ್ನೂ ಮಾಡದೆ ಮುಖವನ್ನು ತಿರುಗಿಸಿಕೊಂಡು ಹೊರಟು ಹೋದಳು. ನೀಲಗಿರಿಯ ಬೆಟ್ಟಗಳಲ್ಲಿ ಬಡವರಿಗಾಗಿ ರಾಮಕೃಷ್ಣ ಮಿಷನ್ ನಡೆಸುತ್ತಿದ್ದ ಸೇವೆಯನ್ನು ಕಂಡು ಸಿಟ್ಟು ಆಕೆಗೆ! ಸ್ವಾಮೀಜಿಯವರ ಸೇವಕನಿಗೆ ಆ ಮಹಿಳೆಯ ವರ್ತನೆಯಿಂದ ದುಃಖ ವಾಯಿತು. "ಮಹಾರಾಜ್! ನೀವು ಏಕೆ ಅವಳಿಗೆ ನಮಸ್ಕಾರ ಮಾಡಿ ದಿರಿ? ಅವಳು ನಿಮಗೆ ಅವಮಾನ ಮಾಡಿದಳು!" ಎಂದನು. ಸ್ವಾಮಿ ಶಿವಾನಂದಜಿ ಅವರು ಶಾಂತ ಭಾವದಿಂದ ಉತ್ತರಿಸಿದರು: **" ಪರವಾಗಿಲ್ಲ, ಬಿಡು! ಪ್ರಪಂಚದಲ್ಲಿರುವ ಎಲ್ಲ ಮಹಿಳೆಯರಿಗೂ ನಾವು ಗೌರವ ಸಲ್ಲಿಸಬೇಕು. ಜಗದ್ಧಾತ್ರಿಯು ಎಲ್ಲರಲ್ಲೂ ಪ್ರಕಟ ವಾಗಿದ್ದಾಳೆ."**

***

**ಇ**ದೂ ಕೂಡ ನೀಲಗಿರಿಯಲ್ಲಿ ನಡೆದ ಘಟನೆಯೇ ಆಗಿದೆ. ಸ್ವಾಮಿ ಶಿವಾನಂದರ ದರ್ಶನಕ್ಕಾಗಿ ಮುಂಬಯಿನಿಂದ ಮುಸಲ್ಮಾನ ವೈದ್ಯರೊಬ್ಬರು ತಮ್ಮ ಪತ್ನಿ ಮತ್ತು ಮಕ್ಕಳೊಡನೆ ಬಂದರು. ಅವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸವನ್ನು ಪಡೆದವರು. ಮಾತಿನ ನಡುವೆ ವೈದ್ಯರು, "ನನ್ನ ಪತ್ನಿಯು ನಿಮ್ಮೊಡನೆ ಮಾತನಾಡಲು ಕಾತುರ ಳಾಗಿದ್ದಾಳೆ" ಎಂದರು. ಆಕೆಯು ಶ್ರದ್ಧಾಭಕ್ತಿಗಳಿಂದ ಸ್ವಾಮಿಗಳಿಗೆ ನಮಸ್ಕರಿಸಿ, ತನ್ನ ಆಧ್ಯಾತ್ಮಿಕ ಜೀವನಕ್ಕೆ ಸಂಬಂಧಪಟ್ಟ ಅನೇಕ ರಹಸ್ಯಗಳನ್ನು ಹೇಳಿಕೊಂಡಳು. ಅವಳು ಅನೇಕ ಬಾರಿ ಶ್ರೀಕೃಷ್ಣನ ದರ್ಶನವನ್ನು ಪಡೆದಿದ್ದಳು. ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶ ಗಳನ್ನು ಓದಿದ ಮೇಲೆ, ಶ್ರೀಕೃಷ್ಣನೇ ಶ್ರೀರಾಮಕೃಷ್ಣರಾಗಿ ಜನಿಸಿದ್ದಾರೆಂಬ ದೃಢನಂಬಿಕೆ ಅವಳದಾಗಿತ್ತು.

ಹೊರಡುವ ಸಮಯದಲ್ಲಿ ಸ್ವಾಮಿಗಳ ಪಾದಗಳ ಮೇಲೆ ಮಂಡಿಯೂರಿ ಕುಳಿತು ಹೀಗೆ ಪ್ರಾರ್ಥಿಸಿಕೊಂಡಳು: **" ದಯವಿಟ್ಟು ನನ್ನ ತಲೆಯ ಮೇಲೆ ಕೈಯಿಟ್ಟು ಆಶೀರ್ವದಿಸಿ. ಶ್ರೀರಾಮಕೃಷ್ಣರ ಸಂಗಡ ಇರುವ ಸೌಭಾಗ್ಯವು ನಿಮಗೆ ದೊರೆತಿತ್ತು. ಅದಲ್ಲದೆ ಅವರ ಕೃಪೆಗೆ ಕೂಡ ನೀವು ಪಾತ್ರರಾಗಿರುವಿರಿ. ಶ್ರೀಗುರುದೇವರನ್ನು ಸ್ಪರ್ಶಿಸಿದ ಆ ಕೈಗಳಿಂದ ನನ್ನ ತಲೆಯನ್ನು ಒಮ್ಮೆ ಸ್ಪರ್ಶಿಸಿ."** ಹೀಗೆ ಹೇಳುತ್ತಾ ಅವಳು ಧಾರಾಕಾರವಾಗಿ ಕಣ್ಣೀರು ಸುರಿಸಿದಳು.

***

**ಸ್ವಾ**ಮಿ ವಿವೇಕಾನಂದರ ಪಾಶ್ಚಾತ್ಯ ಭಕ್ತೆಯಾದ ಜೋಸೆಫಿನ್ ಮೆಕ್ಲೌಡ್ ಬೇಲೂರು ಮಠದ ಅತಿಥಿ ಗೃಹದಲ್ಲಿದ್ದಾಗ, ಒಂದು ರಾತ್ರಿ ಕಳ್ಳನೊಬ್ಬ ಆಕೆಯ ಕೊಠಡಿಗೆ ನುಗ್ಗಿದ. ಆಕೆ ಇಟ್ಟುಕೊಂಡಿದ್ದ, ಸ್ವಾಮಿ ವಿವೇಕಾನಂದರ ಕೂದಲಿದ್ದ ಸಂಪುಟವೊಂದನ್ನು ಕದಿಯಲು ಪ್ರಯತ್ನಿಸಿದ. ಜೋಸೆಫಿನ್ ಮೆಕ್ಲೌಡ್ ಕೂಗಿಕೊಂಡಿದ್ದರಿಂದ ಎಚ್ಚರ ಗೊಂಡ ಇತರರು ಅವನ ಕೈಕಾಲುಗಳನ್ನು ಕಟ್ಟಿ ಮೊಗಸಾಲೆಗೆ ತಂದರು. ಸ್ವಾಮಿ ಶಿವಾನಂದರು, ಎಂದಿನಂತೆ ಗಾಳಿಸೇವನೆಗೆ ಬಂದವರು, ಕಳ್ಳನನ್ನು ನೋಡಿದರು. "ಕದಿಯಲು ಇದೊಂದು ಸ್ಥಳವೇ?" ಎಂದು ತಮಾಶೆಯಾಗಿ ಕೇಳಿದರು.

ನಂತರ ಮೆಕ್ಲೌಡ್, " ಆ ಕಳ್ಳ ಭಕ್ತನಿರಬೇಕು. ಬೇರೆ ಏನನ್ನೂ ಕದಿಯದೇ, ಆ ಸಂಪುಟಕ್ಕೆ ಮಾತ್ರ ಕೈಹಾಕಿದ್ದ" ಎಂದರು. ಸ್ವಾಮಿ ಶಿವಾನಂದರು ಮಗುವಿನಂತೆ ಆ ಮಾತುಗಳನ್ನು ನಂಬಿಬಿಟ್ಟರು. ಒಡನೇ ಆ ಕಳ್ಳನನ್ನು ಬಿಡುಗಡೆ ಮಾಡಿಸಿ, ಗಂಗಾಸ್ನಾನ ಮಾಡುವಂತೆ ಹೇಳಿ, ಉಟ್ಟುಕೊಳ್ಳಲು ಹೊಸ ಬಟ್ಟೆಗಳನ್ನೂ ಕೊಟ್ಟರು! ನಂತರ ತಮಗೆ ನಮಸ್ಕರಿಸಲು ಬಂದ ಅವನಿಗೆ, " ಏನಪ್ಪಾ, ಸಂನ್ಯಾಸಿ ಯಾಗುತ್ತೀಯಾ?" ಎಂದು ಪ್ರೀತಿಯಿಂದ ಛೇಡಿಸಿದರು!

ಅದಕ್ಕೆ ಅವನು ಏನು ಉತ್ತರ ಕೊಟ್ಟನೋ ತಿಳಿಯದು. ಆದರೆ ಕಳ್ಳನ ಜೀವನದಲ್ಲಿ ಇದು ಮರೆಯಲಾಗದ ಘಟನೆ ಎನ್ನುವುದು ಮಾತ್ರ ಸತ್ಯ.